**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147**

**ದಿನಾಂಕ: 21-11-2020 ರಂದು ನವೆಂಬರ್-2020 ಮಾಹೆಯ**

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಜಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ: 21.11.2020 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಸಂಪತ್
2. ಶ್ರೀ ತ್ಯಾಗರಾಜ್
3. ಶ್ರೀಮತಿ ವಿ. ಹೇಮಾವತಿ
4. ಶ್ರೀ ಬಿ.ಡಿ. ನಾಗರಾಜು
5. ಶ್ರೀ ಕೆಂಪರಾಜು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ವೆಂಕಟೇಶ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-147, ಆಡುಗೋಡಿ
3. ಶ್ರೀ ಶಾಹಿದ್ ಹೈದರ್, ಹಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ವಿಜಯ್‌ಕುಮಾರ್, ತೆರಿಗೆ ವಸೂಲಿಗಾರರು, ಕಂದಾಯ ಇಲಾಖೆ
5. ಶ್ರೀ ವೆಂಕಟಶಿವ ರೆಡ್ಡಿ, ಕಿರಿಯ ಅಭಿಯಂತರರು, ಬೆಸ್ಕಾಂ
6. ಶ್ರೀ ಆರ್. ಸುರೇಶ್, ಎ.ಎಸ್.ಐ. ಸಂಚಾರ ಪೋಲಿಸ್ ಠಾಣೆ
7. ಶ್ರೀ ಚಿಕ್ಕ ಚಲುವಯ್ಯ, ಎ.ಎಸ್.ಐ. ಆಡುಗೋಡಿ ಪೋಲಿಸ ಠಾಣೆ
8. ಶ್ರೀ ಮಾರುತಿ, ಮಾರ್ಷಲ್
9. ಶ್ರೀ ರಾಘವೇಂದ್ರ ಪೂಜಾರ್, ಸೂಪರ್‌ವೈಸರ್

* * * * *

ಶ್ರೀ ಬಸವರಾಜ್ ಕಬಾಡಿ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ವಾರ್ಡ್ 147 ರ ಸಭೆಯನ್ನು ಪ್ರಾರಂಭಿಸಿ ನೋಡಲ್ ಅಧಿಕಾರಿ ರವರು ವಾರ್ಡ್ ಅನ್ನು ಸ್ವಚ್ಛವಾಗಿಡಲು ಪೌರಕಾರ್ಮಿಕರುಗಳಿಗೆ ಹಾಗೂ ಆರೋಗ್ಯ ಅಧಿಕಾರಿಗಳಿಗ ತಿಳಿಸಿದರು ಹಾಗೂ ಆಟೋ ಟಿಪ್ಪರ್, ಕಾಂಪ್ಯಾಕ್ಟರ್‌ಗಳ ಮಾಹಿತಿ ಪಡೆದರು ಹಾಗೂ ಸಭೆಯಲ್ಲಿದ್ದವರೆಲ್ಲರಿಗೂ ಮಾಹಿತಿ ನೀಡಿದರು, ಪ್ರತಿದಿನ ಒಣ ತ್ಯಾಜ್ಯ, ಹಸಿ ತ್ಯಾಜ್ಯ ಸಂಗ್ರಹಣೆಯ ಬಗ್ಗೆ ಮಾಹಿತಿ ಪಡೆದರು ಮತ್ತು ಆಡುಗೋಡಿ ವಾರ್ಡ್‌ನಲ್ಲಿ 80% ಕಸವಿಂಗಡಣೆ(Segregation) ಮಾಡುತ್ತಿರುವುದರಿಂದ ನೋಡಲ್ ಅಧಿಕಾರಿಗಳು Samarthanam Teamನ ಅಧಿಕಾರಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.



Scanned by CamScanner

ಪೌರಕಾರ್ಮಿಕರುಗಳಿಗೆ ಪೊರಕೆಗಳನ್ನು ಒಂದು ವರ್ಷದಿಂದ ಪೂರೈಸಿಲ್ಲ. ಪೌರಕಾರ್ಮಿಕರುಗಳು ತಮ್ಮ ಸ್ವಂತ ಹಣದಿಂದ ಪೊರಕೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಪೌರಕಾರ್ಮಿಕರುಗಳಿಗೆ ಬಿ.ಬಿ.ಎಂ.ಪಿ. ವತಿಯಿಂದ ಪೊರಕೆಗಳನ್ನು ಪೂರೈಸಲು ಸಂಪತ್‌ರವರು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಸ್ಥಳದಲ್ಲಿ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಸಂತೋಷ್ ರವರಿಗೆ ದೂರವಾಣಿ ಕರೆಮಾಡಿ ತಕ್ಷಣ ಪೊರಕೆಗಳನ್ನು ನೀಡಲು ತಿಳಿಸಿದರು.

ಬಿ.ಡಿ.ಎ. ನಾಗರಾಜು ರವರು ಮಾತನಾಡಿ ಒಣತ್ಯಾಜ್ಯ ಸಂಗ್ರಹಕ್ಕೆ ಹೆಚ್ಚುವರಿಯಾಗಿ ಒಂದು ಆಟೋ ನೀಡಲು ಕೋರಿದರು. ಇದಕ್ಕೆ ನೋಡಲ್ ಅಧಿಕಾರಿ ರವರು ಮಾತನಾಡಿ, ಹೆಚ್ಚುವರಿ ವಾಹನಕ್ಕೆ ತಕ್ಷಣ ಪ್ರಸ್ತಾವನೆ ಕಳುಹಿಸಿ, ತಕ್ಷಣ ಅನುಮತಿ ಮಾಡಿಸಿಕೊಡುವುದಾಗಿ ತಿಳಿಸಿದರು.

ನೋಡಲ್ ಅಧಿಕಾರಿ ರವರು ವಾರ್ಡ್-147 ಮಾರ್ಷಲ್ ರವರಿಂದ ರಾತ್ರಿ ಸಮಯದಲ್ಲಿ ಕಸ ಹಾಕುವವರಿಂದ ವಸೂಲಿ ಮಾಡಿರುವ ದಂಡದ ವಿವರಗಳನ್ನು ಪಡೆದರು. ಹಾಗೂ ಮಾಸ್ಕ್ ಹಾಕದೆ ಸಂಚರಿಸುವ ಸಾರ್ವಜನಿಕರಿಂದ ವಸೂಲಿ ಮಾಡಿರುವ ದಂಡದ ವಿವರಗಳನ್ನು ಸಭೆಗೆ ತಿಳಿಸಿದರು.

ವಾರ್ಡ್ ಕಮಿಟಿ ಸದಸ್ಯರಾದ ಹೇಮಾವತಿಯವರು ಮಾತನಾಡಿ, ಹೊಸೂರು ರಸ್ತೆ, ಇಂದಿರಾ ಕ್ಯಾಂಟೀನ್ ಸ್ಥಳದಿಂದ ಬಯೋಮೆಟ್ರಿಕ್ ಪಾಯಿಂಟ್‌ನ್ನು ಮಂಗಳ ಕಲ್ಯಾಣ ಮಂಟಪದ ಬಳಿ ಸ್ಥಳಾಂತರಿಸಲು ಸೂಚಿಸಿದರು. ಈ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು ಕೂಡಲೇ ಸ್ಥಳಾಂತರಿಸಲು ಸೂಚಿಸಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಆದ ಹೈದರ್ ರವರು ಮಾತನಾಡಿ ಕೋವಿಡ್ ಟೆಸ್ಟ್ ಬಗ್ಗೆ ಹಾಗೂ ಕೋವಿಡ್ ಬಗ್ಗೆ ಸಭೆಗೆ ಎಲ್ಲಾ ಮಾಹಿತಿಗಳನ್ನು ನೀಡಿದರು.

ಬಿ.ಡಿ.ಎ. ನಾಗರಾಜು ರವರು ಮಾತನಾಡಿ, ವಾರ್ಡ್‌ನಲ್ಲಿರುವ ರಸ್ತೆಗುಂಡಿಗಳನ್ನು ಮುಚ್ಚಬೇಕೆಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ವಾರ್ಡ್ ಇಂಜಿನಿಯರ್ ಶ್ರೀ ವೆಂಕಟೇಶ್ ರವರು 7ನೇ ಬ್ಲಾಕ್‌ನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, 8ನೇ ಬ್ಲಾಕ್ ನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗುವುದು ಎಂದು ಸಭೆಗೆ ತಿಳಿಸಿದರು.

ರಸ್ತೆಯಲ್ಲಿ ಕೆಲವು ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ತ್ಯಾಗರಾಜು ರವರು ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರು ಜ್ಞಾನೇಶ್ ರವರಿಗೆ ಫೋನ್ ಕರೆ ಮಾಡಿ ಬೀದಿ ದೀಪಗಳನ್ನು ಸರಿಪಡಿಸಲು ತಿಳಿಸಿದರು. ಹಾಗೂ ಮುಂದಿನ ವಾರ್ಡ್ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ನೋಡಾಲ್ ಅಧಿಕಾರಿಯವರಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Venkatesh

(ಶ್ರೀ ವೆಂಕಟೇಶ)
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು,
ವಾರ್ಡ್-147 ಆಡುಗೋಡಿ ವಿಭಾಗ



Scanned by CamScanner



Scanned by CamScanner



Scanned by CamScanner




Scanned by CamScanner